# ನೀರಿನೊಳಗಿನ ಮಂಜು

■ ಡಾ.ನಾ. ಮೊಗಸಾಲೆ

ಕಲೆ: ಮನೋಹರ ಕೆ. ಆಚಾರ್ಯ



## ಸವಿ ನೆನಪುಗಳ ಸುಳಿಯಲ್ಲಿ...

‘ಸರ್ ನಾನು ಬಾಲ್ಯದಲ್ಲೇ ತಂದೆಯನ್ನು ಕಳಕೊಂಡ ಹುಡುಗ. ನನ್ನನ್ನು ಓದಿಸಿ ಈ ಹಂತಕ್ಕೆ ತಂದವರು ನನ್ನ ಸೋದರ ಮಾವ. ಅವರೂ ಕಳೆದ ವರುಷ ತೀರಿಕೊಂಡಿದ್ದಾರೆ. ಹಾಗಾಗಿ ಇಂಥ ಶುಭ ಸಮಾರಂಭಗಳಲ್ಲಿ ನನ್ನ ತಂದೆಯಾಗಿ ಅಥವಾ ಮಾವನಾಗಿ ಬರುವವರು ಬೇರೆ ಯಾರೂ ಇಲ್ಲ. ಅದೆಲ್ಲ ನೀವೇ ಅಂದುಕೊಂಡಿದ್ದೇನೆ’ ಎಂದು ಕುಲಕರ್ಣಿಯವರು ಹೇಳಿದ್ದರು. ಆಗ ರಾಯರು ‘ಛೆ!’ ಎಂದು ಕುಲಕರ್ಣಿಯವರ ಬಗ್ಗೆ ಕನಿಕರ ವ್ಯಕ್ತಪಡಿಸಿ, ‘ಇಟ್ ಈಸ್ ಪ್ರೆಸ್ಟೀಜ್ ಟು ಮಿ’ ಎಂದು ನಿಶ್ಚಿತಾರ್ಥಕ್ಕೂ ಹೋಗಿದ್ದರು. ಅಲ್ಲಿ ಕುಲಕರ್ಣಿಯವರು ‘ಇವರೇ ನನ್ನ ಮಾವ’ ಎಂದೇ ಅಲ್ಲಿ ನೆರೆದಿದ್ದವರಿಗೆ ರಾಯರನ್ನು ಪರಿಚಯ ಮಾಡಿಸುವಾಗ, ರಾಯರಿಗೆ ಮುಜುಗರವಾದರೂ ಕೈ ಕುಲುಕಿದವರಿಗೆಲ್ಲ ರಾಯರು, ‘ನೈಸ್ ಟು ಮೀಟ್ ಯು’ ಎಂದು ಹೇಳುತ್ತಾ ಮುಗುಳು ನಗುತ್ತಿದ್ದರು. ಮುಂದೆ ‘ಮದುವೆಗೂ ನೀವೇ ಧಾರೆ ಎರೆಸಿಕೊಳ್ಳಬೇಕು’ ಎಂದು ಕುಲಕರ್ಣಿ ಒತ್ತಾಯಿಸಿದಾಗ, ‘ನೋ ನೋ, ಅದು ಸರಿ ಅಲ್ಲ. ನಿಮ್ಮ ಆಪ್ತೇಷ್ಟರಲ್ಲಿ ಅಥವಾ ಕುಟುಂಬ ವರ್ಗದಲ್ಲಿ ಯಾರಿದ್ದಾರೆ ಎಂದು ನಿಮ್ಮ ತಾಯಿಯನ್ನು ಕೇಳಿ ಆಯ್ಕೆ ಮಾಡಿ’ ಎಂದು ರಾಯರು ಉಚಿತವಾಗಿ ಧಾರೆ ಎರೆಸಿಕೊಳ್ಳಲು ಬಂದ ಆಹ್ವಾನವನ್ನು ನಯವಾಗಿ ನಿರಾಕರಿಸಿದ್ದರು. ಕೊನೆಗೂ ಸತೀಶ ಕುಲಕರ್ಣಿಯವರು ತಮ್ಮ ದೂರದ ಬಂಧುಗಳನ್ನು ಮುಂದಿಟ್ಟುಕೊಂಡು ಧಾರೆ ಎರೆಸಿಕೊಂಡಿದ್ದರು. ಆದರೆ ರಾಯರು ಸತೀಶ್ ಕುಲಕರ್ಣಿಯ ಆ ಸಮಾರಂಭದಲ್ಲಿ ನಿಜವಾದ ಮಾವನಂಥ ಮಾವನಾಗಿ ಬಂದವರನ್ನೆಲ್ಲ ಎದುರುಗೊಂಡು ಸಂಭ್ರಮಿಸಿದ್ದರು ಮತ್ತು ಹತ್ತಾರು ಸಲ ಮದುವೆ ಮಂಟಪವನ್ನು ಏರಿ ಫೋಟೊಕ್ಕೆ ಬೇರೆ ಬೇರೆ ರೀತಿಯಲ್ಲಿ ಪೋಸು ಕೊಟ್ಟಿದ್ದರು.

ಮದುವೆಯಾಗುವಾಗ ಜಯಂತಿ ಕುಲಕರ್ಣಿ ರಾಂಪುರದ ಒಂದು ಹೈಸ್ಕೂಲಿನಲ್ಲಿ ಕನ್ನಡ ಟೀಚರಾಗಿದ್ದಳು. ಅದು ಖಾಸಗಿ ಹೈಸ್ಕೂಲಾಗಿದ್ದುದರಿಂದ ಸಂಬಳವೆನ್ನುವುದು ‘ನಾಮಕಾವಸ್ಥೆ’ಯದಾಗಿತ್ತು. ಎಂ.ಎ. ಓದಿ ಮನೆಯಲ್ಲಿ ಸುಮ್ಮನೇ ಕುಳಿತುಕೊಳ್ಳುವುದಕ್ಕಿಂತ ಹವ್ಯಾಸದ ಥರ ಪಾಠವನ್ನಾದರೂ ಮಾಡಿ ‘ಟೈಂಪಾಸ್’ ಮಾಡಬಹುದು ಎಂಬಂತೆ ಆಕೆ ಹೈಸ್ಕೂಲಲ್ಲಿ ದುಡಿಯುತ್ತಿದ್ದಳು. ಬಸವೇಶ್ವರ ಕಾಲೇಜಿನಲ್ಲಿರುವ ಸತೀಶ್ ಕುಲಕರ್ಣಿ ಇಂಗ್ಲಿಷ್ ಲೆಕ್ಚರರ್ ಆಗಿದ್ದಾರೆ ಎಂಬುದರಿಂದ ಮದುವೆಯ ಪೂರ್ವದಲ್ಲೇ ಆಕೆ ತಾನೂ ಆ ಕಾಲೇಜಿನಲ್ಲಿ ಸೇರಬೇಕೆಂಬ ಕನಸು ಕಂಡಿದ್ದಳು. ಆ ಕನಸನ್ನು ಆಕೆ ಮದುವೆಯಾದ ಹೊಸ ದಿನಗಳಲ್ಲೇ ಗಂಡನ ಮುಂದಿಟ್ಟಾಗ ಆತ ‘ವೈ ನಾಟ್ ಮೈ ಡಿಯರ್, ಲೆಟ್ ಅಸ್ ಟ್ರೈ’ ಎಂದು ಹೇಳಿ, ‘ನಾನು ಶ್ರೀನಿವಾಸರಾಯರನ್ನು ಕೇಳುತ್ತೇನೆ. ಅವರು ‘ಎಸ್’ ಅಂದರೆ ಕೆಲಸ ಆದ ಹಾಗೇ ಎಂದು ಹೇಳಿದ್ದರು. ಆಮೇಲೆ ಅದೇ ದಿನ ಸಂಜೆ ಕಾಲೇಜ್ ಮುಗಿಸಿ ರಾಯರು ಹೊರಟು ನಿಂತಾಗ ಅವರ ಬಳಿ ಬಂದು, ‘ಮಾವ, ನೀವು ಈ ದಿನ ನಮ್ಮಲ್ಲಿಗೆ ಬರಬೇಕು ಮತ್ತು ಟೀ ಕುಡಿದು ಹೋಗಬೇಕು’ ಎಂದು ವಿನಂತಿಸಿದ್ದರು.

ಮದುವೆಯ ದಿನದ ತನಕ ಶ್ರೀನಿವಾಸರಾಯರನ್ನು ‘ಸರ್’ ಎಂದು ಕರೆಯುತ್ತಿದ್ದ ಸತೀಶ ಕುಲಕರ್ಣಿ ಮದುವೆಯ ಮರುದಿನದಿಂದ ಅವರನ್ನು ‘ಮಾವ’ ಎಂದೇ ಕರೆಯಹತ್ತಿದ್ದರು. ‘ಎಸ್, ಇದು ಯಾಕೆ?’ ಎಂದು ರಾಯರು ಪ್ರಶ್ನಿಸಿದಾಗ ಕುಲಕರ್ಣಿ ‘ಎಲ್ಲಾ ಅರ್ಥದಲ್ಲೂ ಈಗ ನೀವು ನನ್ನ ಮಾವ. ಸೋ, ಇನ್ನು ಮುಂದೆ ನಾನು ನಿಮ್ಮನ್ನು ಕರೆಯುವುದು ಹಾಗೇ!’ ಎಂದಿದ್ದರು. ರಾಯರು ನಕ್ಕು ಕುಲಕರ್ಣಿಯವರ ಹೆಗಲ ಮೇಲೆ ಕೈ ಇಟ್ಟು ‘ದ್ಯಾಟೀಸ್ ಗುಡ್! ಓಕೆ’ ಎಂದು ಅದನ್ನು ಒಪ್ಪಿಕೊಂಡಿದ್ದರು.

ಶ್ರೀನಿವಾಸರಾಯರು ಸತೀಶ್ ಕುಲಕರ್ಣಿ ಅವರ ಮನೆಗೆ ಹೋದಾಗ ಬಾಗಿಲು ತೆರೆದು ಸ್ವಾಗತಿಸಿದ ಜಯಂತಿ ಕುಲಕರ್ಣಿ, ಶ್ರೀನಿವಾಸರಾಯರು ಸೋಫಾದಲ್ಲಿ ಕುಳಿತುಕೊಳ್ಳುತ್ತಿದ್ದ ಹಾಗೆ ಅವರ ಪಾದ ಮುಟ್ಟಿ ನಮಸ್ಕರಿಸಿ ‘ನಮ್ಮ ಮನೆಗೆ ಮೊತ್ತಮೊದಲು ಬರುತ್ತಿದ್ದೀರಿ. ನಾವು ಕೊಟ್ಟದ್ದನ್ನೆಲ್ಲ ಬೇಡ ಎನ್ನಬಾರದು’ ಎಂದು ಅವರು ಕುಳಿತ ಕುರ್ಚಿಯ ಇದಿರಿದ್ದ ಟೀಪಾಯಿಯಲ್ಲಿ ಎರಡು ತಟ್ಟೆಗಳಲ್ಲಿ ಸಿಹಿ ತಂದಿರಿಸಿ, ‘ಈಗ ಈ ಎರಡೂ ಪ್ಲೇಟುಗಳನ್ನು ಮಾವ ಅಳಿಯ ಇಬ್ಬರೂ ಸೇರಿ ಖಾಲಿ ಮಾಡಬೇಕು. ಅಷ್ಟರಲ್ಲಿ ನಾನು ನಿಮ್ಮ ಆಯ್ಕೆ ಕಾಫಿಯೋ ಟೀಯೋ ಏನು ಹೇಳಿ, ಅದನ್ನು ಸಿದ್ಧಪಡಿಸುತ್ತೇನೆ’ ಎಂದು ಕೈ ಮುಗಿದಿದ್ದಳು.

ರಾಯರಿಗೆ ಆ ಪ್ಲೇಟುಗಳಲ್ಲಿದ್ದ ಐಟಂಗಳನ್ನು ನೋಡಿಯೇ ಭಯವಾಯಿತು. ‘ಸಾರಿ ಜಯಂತಿ. ನಾನು ಒಂದೇ ಒಂದು ಪೀಸ್ ಇದರಲ್ಲಿ ತೆಗೆಯು